ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಸೋಮವಾರ, ದಿನಾಂಕ : 28 ನೇ ಸೆಪ್ಟೆಂಬರ್, 2020

ರಾಷ್ಟ್ರೀಯ ಶಿಕ್ಷಣ ರೀತಿ 2020ರ ಅನುಷ್ಠಾನಗೊಳಿಸುವ ಕುರಿತು

ಶ್ರೀಕೆ.ಪ್ರತಾಪ್‌ಸಿಂಹನಾಯಕ್(ವಿಧಾನಸಭೆಯಿಂದಚುನಾಯಿತರಾದವರು) :-

827 (872) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) 2020ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪರಿಣಾಮಕಾರಿ ಅನುಷ್ಠಾನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) 10+2+3 ಪದ್ಧತಿಯಿಂದ 5+3+3+4 ಪದ್ಧತಿಗೆ ಪರಿವರ್ತನೆಯಾಗುವ ಕಾಲಘಟ್ಟದಲ್ಲಿ ಇಲಾಖೆಗಳ ವಿಲೀನ, ವೃಂದ ಮತ್ತು ಸೇವಾ ನೇಮಕಾತಿಗಳ ಪುನರ್ ರಚನೆ, ಮೂಲಭೂತ ಸೌಕರ್ಯ ಮತ್ತು ಇಲಾಖೆಯಲ್ಲಿ ಲಭ್ಯವಿರುವ ಮಾನವ ಸಂಪನ್ಮೂಲದ ಪುನರ್ ವಿಂಗಡಿಸುವ ಕುರಿತಾಗಿ ಸರ್ಕಾರ ಏನು ಕ್ರಮ ಕೈಗೊಂಡಿದೆ ;

(ಇ) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧೀನದಲ್ಲಿರುವ ಅಂಗನವಾಡಿ ಕೇಂದ್ರಗಳನ್ನು ಶಿಕ್ಷಣ ಇಲಾಖೆಯೊಂದಿಗೆ ವಿಲೀನಗೊಳಿಸುವ ಪ್ರಕ್ರಿಯೆ ಪ್ರಾರಂಭವಾಗಿದೆಯೇ ? (ವಿವರ ನೀಡುವುದು)